ಯಡತೊರೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ.

ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
2 1882—83	ಯಡತೊರೆ ತಾಲ್ಲೂಕು ಗೆಗೆಕೆರೆ ಗ್ರಾಮದಲ್ಲಿ ವಾಸವಾಗಿರುವ ಸ್ಮಾರ್ತ ಬ್ರಾಹ್ಮಣ ತಮ್ಮಯ್ಯನವರ ಮಗ ಹಾಲೀ ಗಂದನಹಳ್ಳಿ ಫಿರಖಾ ಶಾನುಭೋಗ ಕೆಲಸ ನೋಡುವ ನಂಜುಂಡಯ್ಯ	ಯಡತೊರೆ ತಾಲ್ಲೂಕು ಪುರದ ಹೋಬಳಿ ಹಂಪಾಪುರದ ಗ್ರಾಮದಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕಟೇಶಯ್ಯನವರ ಮಗ ರಾಮಣಿ	14—6—82	14—7—82	ಶಾನುಭೋಗತನದ ಕೆಲಸ ನೋಡುವಂತೆ ಹುಕುಂ ಆಗಿರುವದರಿಂದ ಶಾನಾಯದ ಹುಟ್ಟುವಳಿ ಪೈಕೀ 18 ರೂಪಾಯಿಗಳನ್ನೆ ಸಾಲಿಯಾನಾ 10 ವರುಷದ ವರಿಗೂ ಪಾವತೀ ಮಾಡುವದಾಗಿ ಕರಾರು.
ತಿರಸ್ಕರಿಸಿದ್ದು 1882	ಮೈಸೂರು ಕಿಲ್ಲೇಯಲ್ಲಿ ವಾಸವಾಗಿ ಇರುವ ಸ್ಮಾರ್ತ ಬ್ರಾಹ್ಮಣ ಅಂಬಳಿ ಸುಬ್ರಹ್ಮಣ್ಯ ಪಂಡಿತರ ಮಗ ಅಂಬಳಿ ಅಣಯ್ಯ ಪಂಡಿತರು	ಮೈಸೂರು ಕಿಲ್ಲೇಯಲ್ಲಿರುವ ರುಕ್ಮಿತ ಪುಟ್ಟಣ್ಣಕಾಸ್ತ್ರಿಗಳ ಮಕ್ಕಳು ಮೈದೀಕವೃತ್ತಿಯಿಂದ ಜೀವಿಸುವ ಕೃಷ್ಣ ಶಾಸ್ತ್ರಿಗಳು	8—10—81		1,200 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್ ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 10ನೇ ಸೆಪ್ಟೆಂಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಗುಡ್ಡದ ಬೀರನಹಳ್ಳಿ ಗ್ರಾಮಕ್ಕೆ ಕೇಂದ 3ನೇ ಸರ್ವೆ ನಂಬರಿಗೆ ದಾಖಲಾದ ಬಂಜರ್ ಜಮೀನ್ ಪೈಕಿ ಸುಮಾರು 400 ಎಕರೆ ಜಮೀನಿಗಾಗಿ ಕಾಫೀ ನಾಗುವಳೀ ಬಗ್ಗೆ ದರಖಾಸ್ತು ಬಂದಿರುವದರಿಂದ, ಸದರೀ ಜಮೀನು 1884ನೇ ಇಸವಿ ಆಕ್ಟೋಬರ್ 15ನೇ ಮುಕ್ತಮಿನಲ್ಲಿ ಅಮಲ್‌ದಾರ್ರ ರೂಬರೂ ತರೀಕೆರೆ ಮೊಕ್ತಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಪರಂತು ಸದರೀ ಕ್ರಯವು ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯವನ್ನು ತೆರುವದಕ್ಕೂ ಮತ್ತು ಯಾವದಾದರೂ ನೀರಿನ ಹಕ್ಕುದಾರಿ ಮತ್ತು ಅವಶ್ಯಕವಾದ ಮಾರ್ಗದ ಹಕ್ಕುದಾರಿ ಯಿವ್ಗಳ ಉಳಿಸಿಕ್ಕೊಳ್ಳುವಿಕೆಗೂ ವಳಪಟ್ಟಿರತಕ್ಕದ್ದು.

2. ಕ್ರಯದಾರನು ಹರಾಜು ಕೈದಾದ ಕೂಡ್ಲೆ ಕ್ರಯದ ಮೊಬಲಗ್ ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು, ಮತ್ತು ಬಾಕೀ ಕ್ರಯದ ಮೊಬಲಗನ್ನು ಹರಾಜು ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತೀ ಮಾಡದೇ ಯಿದ್ದರೆ, ಹಾಗೆ ಡಿಪಾಜಿಟ್ ಯಿಡೋಣಾದ ಮೊಬಲಗು ಸರಕಾರಕ್ಕೆ ಥಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದು.

3. ಹಾಗೆ ಡಿಪಾಜಿಟ್ ಕೊಡದೇ ಹೋದರೆ ಯಾ ಕ್ರಯದ ಬಾಕೀ ಮೊಬಲಗನ್ನು ಪಾವತೀ ಮಾಡದಿದ್ದಲ್ಲಿ ಅವ್ವಲ್ ಕ್ರಯದಾರನ ಖರ್ಚಿಗೂ ವ ಲುಕ್‌ಸಾನಿಗೂ ವಳಪಟ್ಟು ಸದರೀ ಜಮೀನ್ ಪುನಹಾ ಹರಾಜು ಮಾಡಲ್ಪಡುವದು.

4. ಹರಾಜು ಡೆಪ್ಯೂಟಿ ಕಮಿಷನರಿಂದ ಕಾಯಂ ಮಾಡಲ್ಪಡುವ ತನಕ ಜಮೀನಿನ ಹರಾಜು ಕಾಯಮಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚತುರ್ಗಡಿಯು ಇಪ್ಪರಡಿ ಕಾಣಿಸಿರುತ್ತೆ, ಯಿನ್ನೂ ಹೆಚ್ಚಿಗೆ ತಪಸೀಲ್‌ಗಳು ಹರಾಜು ಕಾಲದಲ್ಲಿ ಕೇಳಿ ತಿಳಿದು ಕೊಳ್ಳಬಹುದು, ತಪಸೀಲ್‌ನಲ್ಲಾಗಲಿ ಅಂದಾಜು ಬೀಜವರೀಯಲ್ಲಾಗಲಿ ಯಿರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಶಾಂತಪುರದ ಕಟ್ಟೆ ಹೊಳೆ ಬಳಿಯಣ ಮಾಸ್ಕಾಲ್ ಗಡ್ಡೆ.
ದಕ್ಷಿಣಕ್ಕೆ—ಸದರೀ ಗ್ರಾಮದ 2—13—14ನೇ ಸರ್ವೆ ನಂಬರುಗಳು.
ಪೂರ್ವಕ್ಕೆ—ತಾಯಗಡಬೋಗಿ ಗ್ರಾಮದ ಸರಹದ್ದು.
ಪಶ್ಚಿಮಕ್ಕೆ—ಬೀರನಹಳ್ಳಿಯಿಂದ ಹಲಸೂರಿಗೆ ಹೋಗುವ ಕಾಲುದಾರಿ.

ಮಹಮ್ಮದಲ್ಲಿ, ಕೆ. ಬಿ., ಅಫಿಷಿಯೇಟಿಂಗ್ ಡೆಪ್ಯೂಟಿ ಕಮಿಷನರ್.